ಹೀರೆಕಟ್ಟೆ ಒಡ್ಡುನಿಂದ ರೈತರಿಗೆ ನೀರು ಒದಗಿಸುವುದು

829 - ಶ್ರೀ ಮಲ್ಲಿಕಾರ್ಜುನ ಕೆ.ಬಿ. (ಬೀರೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಡೂರು ತಾಲ್ಲೂಕು ನಿಡಗಟ್ಟೆ ಪ್ರಾಂತ್ಯದ ಹಾಸನ ಜಿಲ್ಲೆ ನೇರಲಿಗೆ ಬಳಿ ಇರುವ "ಹಿರೇಕಟ್ಟೆ ಒಡ್ಡು" ನ ನೀರನ್ನು ಪಡೆಯದೆ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಆ) *ಹಿರೇಕಟ್ಟೆ ಒಡ್ಡಿನಿಂದ ನಿಡಗಟ್ಟೆಯಲ್ಲಿರುವ ಕಾಲುವೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಇ) *ಹಾಗಿದ್ದಲ್ಲಿ, ಈ ಕಾಲುವೆಯನ್ನು ಯಾವಾಗ ದುರಸ್ತಿ ಮಾಡಲಾಗುವುದು?*

ಶ್ರೀ ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಸರ್ಕಾರದ ಗಮನಕ್ಕೆ ಬಂದಿರುತ್ತದೆ. ನಾಲೆಯಲ್ಲಿ ಹೂಳು ತುಂಬಿದ್ದು, ಅಲ್ಲಲ್ಲಿ ಕೊರಕಲು ಉಂಟಾಗಿರುತ್ತದೆ.

ಇ) ಮುಂದಿನ ಸಾಲಿನ ಆರ್ಥಿಕ ಲಭ್ಯತೆಯನ್ನು ಪರಿಗಣಿಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.

ಸಚಿವರುಗಳ ಕಛೇರಿ ಹಾಗೂ ವಸತಿ ಗೃಹಗಳನ್ನು ನವೀಕರಿಸುವುದು

836 - ಶ್ರೀ ಮಲ್ಲಿಕಾರ್ಜುನ ಕೆ.ಬಿ. (ಬೀರೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನೂತನ ಸರ್ಕಾರದ ಮಾನ್ಯ ಸಚಿವರುಗಳ ಕಛೇರಿ ಮತ್ತು ವಸತಿ ಗೃಹಗಳನ್ನು ನವೀಕರಿಸಲು ಹಾಗೂ ಪೀಠೋಪಕರಣಗಳು ಹಾಗೂ ಇತ್ಯಾದಿಗಳಿಗೆ ಇದುವರೆಗೆ ಎಷ್ಟು ವೆಚ್ಚ ಮಾಡಲಾಗಿದೆ?*

ಆ) *ಹಿಂದೆ ಸಚಿವರುಗಳಿಗೆ ಒದಗಿಸಿದ ಪೀಠೋಪಕರಣವನ್ನು (ಕಛೇರಿ ಮತ್ತು ವಸತಿ ಗೃಹ) ಏನು ಮಾಡಲಾಗಿದೆ? ವಿಲೇವಾರಿ ಮಾಡಿದ್ದರೆ ಅದರಲ್ಲಿ ಬಂದ ಹಣವೆಷ್ಟು? (ವಿವರ ಒದಗಿಸುವುದು)*

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಸಚಿವರುಗಳ ಕಛೇರಿ ಮತ್ತು ವಸತಿಗೃಹಗಳ ನವೀಕರಣ ಮತ್ತು ಪೀಠೋಪಕರಣ ಇತ್ಯಾದಿಗಳ ವೆಚ್ಚದ ವಿವರಗಳು ಈ ರೀತಿ ಇದೆ.